**(ದಿನಾಂಕಃ 21-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ಪಾಟಿ ಸವಾಲು : ಪ್ರತಿವಾದಿ ಪರ ಶ್ರೀ ಎ ಎಂ ವಿ ವಕೀಲರಿಂದ -**

ನನ್ನ ತಂದೆ ಬಾಳಪ್ಪ ಈ ಹಿಂದೆ ಆದಂತಹ ಕೋರ್ಟ ಡಿಕ್ರಿ ರದ್ದು ಮಾಡಬೇಕೆಂದು ಈ ದಾವೆ ಮಾಡಿರುತ್ತಾರೆ. ನನ್ನ ತಂದೆ ಸತ್ತ ನಂತರ, ಅವರು ಈ ದಾವೆಯಲ್ಲಿ ಹಾಕಿದ ಮಾಹಿತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ದಾಾ ಜಮೀನು ಸರ್ವೆ ನಂ. 149 ಇರುತ್ತದೆ. ಅದು ಕ್ಷೇತ್ರ 1 ಎಕರೆ 37 ಗುಂಟೆ ಇರುತ್ತದೆ. ಅದರ ಪೂರ್ವಕ್ಕೆ ನಿಂಗಪ್ಪ ಪೂಜೇರಿ ಇವರ ಜಮೀನು , ಪಶ್ಚಿಮಕ್ಕೆ ಶಿವಲಿಂಗಪ್ಪ ಮುತ್ನಾಳೆ ಇವರ ಜಮೀನು, ಉತ್ತರಕ್ಕೆ ಹಿಡಕಲ ಡ್ಯಾಂ ಮತ್ತು ಗೋಕಾಕ ರಸ್ತೆ, ದಕ್ಷಿಣಕ್ಕೆ ಊರಿಗೆ ಹೋಗುವ ಸಿಸಿ ರಸ್ತೆ ಎಂದರೆ ನಿಜ. ಹೊಳೆಯಪ್ಪನ ಮಗ ಕಾಡಪ್ಪ ಪಶ್ಚಿಮದ ಪಟ್ಟಿಯಲ್ಲಿ ಕಬ್ಬು ಬೆಳೆಯುತ್ತಿದ್ದಾನೆ ಎಂದರೆ ನಿಜ. ಆ ಪಟ್ಟಿಯಲ್ಲಿ ಕಾಡಪ್ಪ ಕಬ್ಬಿಣದ ಶೆಡ್ಡು ಹಾಕಿದ್ದಾನೆ ಎಂದರೆ ಸರಿಯಲ್ಲ. ಕಬ್ಬಿಣದ ಶೆಡ್ಡು ಹಾಕಿ ಎಷ್ಟು ವರ್ಷ ಆಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಅಲ್ಲಿ ಕಬ್ಬಿಣದ ಶೆಡ್ಡು ಇಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿ ತನ್ನ ಜಮೀನಿನಲ್ಲಿ ಕಬ್ಬು ಬೆಳೆದ ಬಗ್ಗೆ ಲಾವಣಿ ಫಾರ್ಮ ತುಂಬಿದ್ದಾನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 149 ರಲ್ಲಿ 4 ಪಟ್ಟಿ ಇದೆ ಎಂದರೆ ಸರಿಯಲ್ಲ. ಒಂದು ಪಟ್ಟಿ ಮಾತ್ರ ಇದೆ. ನನ್ನ ತಂದೆಗೆ ಬಂದಂತಹ ಪಟ್ಟಿ ಅದೇ ಜಮೀನಿನಲ್ಲಿ ಪೂರ್ವಕ್ಕೆ ಇರುತ್ತದೆ ಎಂದರೆ ಸರಿಯಲ್ಲ. 11 ಮತ್ತು 12ನೇ ಪ್ರತಿವಾದಿಯಾದ ಬಸವರಾಜ ಮತ್ತು ಅಡಿವೆಪ್ಪನಿಗೆ ಮಧ್ಯದಲ್ಲಿ 2 ಪಟ್ಟಿ ಬರುತ್ತದೆ ಎಂದರೆ ಸರಿಯಲ್ಲ.

2. ನಮ್ಮ ಕುಟುಂಬಕ್ಕೆ 7 ಗುಂಟೆ ಮತ್ತು 2 ಗುಂಟೆಯ 2 ಜಮೀನುಗಳು ಇರುತ್ತವೆ. 7 ಗುಂಟೆ ಜಮೀನು ಶಿಂಧಿಹಟ್ಟಿಯ ಪೆಟ್ರೋಲ ಪಂಪ ಹತ್ತಿರ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ 7 ಮತ್ತು 2 ಗುಂಟೆ ಜಮೀನನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ನಿಜ. ಹೊಸಪೇಟೆ ಗ್ರಾಮದ ಸರ್ವೆ ನಂ. 269 ರಲ್ಲಿ 1 ಗುಂಟೆ 7 ಆಣೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು ಬರುವುದಿಲ್ಲ. ಈ ಜಮೀನನ್ನೂ ಕೂಡ ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ನಿಜ. ಸದರಿ ಜಮೀನಿನಲ್ಲಿ ನನ್ನನ್ನು ಹೊರತು ಪಡಿಸಿ ಸಾಕಷ್ಟು ಜನ ಬೇರೆ ಮಾಲೀಕರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಅವರನ್ನೂ ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಗೊತ್ತಿಲ್ಲ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇಲ್ಲ. ದಾವಾ ಜಮೀನು ಬಿಟ್ಟು ಉಳಿದ ಸರ್ವೆ ನಂಬರಿನ ಬೇರೆ ಜನರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ,

3. ಬಡಿಗೇರ ಓಣಿಯಲ್ಲಿ ನಮಗೆ ಸೇರಿದ ಕರೆ ಹಂಚಿನ ಮನೆ ಇದೆ ಎಂದರೆ ನಿಜ. ಅದು ಪೂರ್ವಾರ್ಜಿತವಾಗಿ ಬಂದ ಮನೆ . ಅದು ದಕ್ಷಿಣಕ್ಕೆ ಮುಖ ಆಗಿದೆ ಎಂದರೆ ನಿಜ. ಆ ಮನೆಯಲ್ಲಿ ನನ್ನ ಕಾಕಾ , ತಂದೆ ಮತ್ತು ದೊಡ್ಡಪ್ಪನ ಹೆಸರು ದಾಖಲೆ ಇದೆ ಎಂದರೆ ನಿಜ. ಆ ಮನೆಯನ್ನೂ ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ನಿಜ. ಆ ಮನೆಯಲ್ಲಿ ನಾವೇ ವಾಸವಾಗಿರುತ್ತೇವೆ. ಲೀಲಾವತಿ ಮತ್ತು ವಂದನಾ ಇವರಿಗೆ ಆ ಮನೆಯಲ್ಲಿ ಪಾಲು ಕೊಟ್ಟಿಲ್ಲ. ಲೀಲಾವತಿ ಮತ್ತು ವಂದನಾ ನನಗೆ ಆ ಮನೆಯಲ್ಲಿ ಪಾಲು ಕೇಳಿಲ್ಲ. ಸದರಿ ಮನೆಯಲ್ಲಿ 30 ವರ್ಷಗಳ ಹಿಂದೆ ನನ್ನ ಕಾಕಾನ ಕಡೆಯಿಂದ ಆತನಿಗೆ ಬಂದ ಜಾಗ ನಮ್ಮ ತಂದೆಯವರು ತೆಗೆದುಕೊಂಡಿರುತ್ತಾರೆ. ಏನು ಪತ್ರ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಪ್ರತಿವಾದಿ 5, 6 ಇವರ ತಂದೆ ಲಕ್ಕಪ್ಪ ಅದಕ್ಕೆ ಸಹಿ ಮಾಡಿದ್ದಾರೊ ಇಲ್ಲವೋ ಎಂದು ಗೊತ್ತಿಲ್ಲ. ಆ ಕಾಗದ ಪತ್ರ ನೋಡಬೇಕು, ಇದ್ದರೆ ಹಾಜರ ಮಾಡುತ್ತೇನೆ.

4. ಹಿಡಕಲ ಡ್ಯಾಂನ ಬಡಗಾವಲಿ ಕೆನಲ ಇರುತ್ತದೆ ಎಂದರೆ ನಿಜ. ಆ ಕೆನಾಲ ಬಾಜು ನನ್ನ ಹಿರಿಯರಿಂದ ಬಂದಂತಹ ಒಂದು ಜಮೀನು ಇದೆ ಎಂದರೆ ಸಾಕ್ಷಿ ಅದು ಪಿಡಬ್ಲ್ಯೂಡಿ ಇಲಾಖೆಯಿಂದ acquire ಆಗಿದೆ ಎಂದು ಹೇಳುತ್ತಾರೆ. ಆ ಜಮೀನಿನಲ್ಲಿ ನನ್ನ ಚಿಕ್ಕಪ್ಪ , ತಂದೆ ಮತ್ತು ದೊಡಪ್ಪ ಇವರ ಹೆಸರು ಇತ್ತು ಎಂದರೆ ಮೊದಲು ಇತ್ತು, ಸದರಿ ಜಮೀನು 60 ವರ್ಷದ ಹಿಂದೆ acquire ಆಗಿದೆ ಎಂದು ಹೇಳುತ್ತಾರೆ. ಆ ಜಮೀನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ನಿಜ. ಪಿಡಬ್ಲ್ಯೂಡಿ ಇಲಾಖೆಯಿಂದ acquire ಆಗಿದೆ ಎಂದು ಹೇಳಲಾದ ಜಮೀನಿನಲ್ಲಿ ಈಗ ನಾವು 15 ವರ್ಷಗಳ ಹಿಂದೆ ಒಂದು ಶೆಡ್ಡು ಹಾಕಿಕೊಂಡಿರುತ್ತೇವೆ. ಆ ಶೆಡ್ಡನ್ನು ಈಗಲೂ ಕಬ್ಜಾ ವಹಿವಾಟು ಮಾಡುತ್ತ ಬಂದಿರುತ್ತೇವೆ ಎಂದರೆ ನಿಜ. ಸದ್ರಿ ಶೆಡ್ಡು ಹಾಕಿದ ಬಗ್ಗೆ ಮತ್ತು ಪಿಡಬ್ಲ್ಯೂಡಿ ಇಲಾಖೆಯಿಂದ acquire ಆದ ವಿಚಾರ ದಾವೆಯಲ್ಲಿ ಹೇಳಿಲ್ಲ ಎಂದರೆ ನಿಜ. ಪಿಡಬ್ಲ್ಯೂಡಿ ಇಲಾಖೆಯಿಂದ acquire ಆಗಿದೆ ಎಂದು ತೋರಿಸಲು ನಮ್ಮ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ದಾಖಲೆ ಹಾಜರ ಮಾಡುತ್ತೇನೆ ಎಂದು ಹೇಳುತ್ತಾರೆ. acquire ಆದ ಬಗ್ಗೆ ದುಡ್ಡು ಬಂತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆ ಜಮೀನು acquire ಆದ ಬಗ್ಗೆ ಹಾಗೂ ಆ ಜಮೀನಿನ ಬದಲಾಗಿ ಮತ್ತೊಂದು ಜಮೀನು ಕೊಡಿ ಎಂದು ಹೈಕೊರ್ಟಿನಲ್ಲಿ ದಾವೆ ಮಾಡಿದ್ದೇವೆ. ಸದರಿ ಜಮೀನು ಪಿಡಬ್ಲ್ಯೂಡಿ ಇಲಾಖೆಯಿಂದ acquire ಆಗಿದೆ ಎಂಬ ಬಗ್ಗೆ ನಾವು ಕೋರ್ಟಿನಲ್ಲಿ ಪ್ರಶ್ನೆ ಮಾಡಿದ್ದೇವೆ. ಅದು ಆಗುತ್ತೊ ಬಿಡುತ್ತೊ ತಲೆ ಕೆಡೆಸಿಕೊಂಡಿಲ್ಲ. ಪಿಡಬ್ಲ್ಯೂಡಿ ಇಲಾಖೆಯಿಂದ acquire ಆದ ಜಮೀನಿನಲ್ಲಿ 3 ಜನ ಪ್ರತ್ಯೇಕವಾಗಿ ವಹಿವಾಟು ಮಾಡುತ್ತಾರೆ ಎಂದರೆ ಸರಿಯಲ್ಲ , ನಾನು ಒಬ್ಬನೇ ವಹಿವಾಟು ಮಾಡುತ್ತೇನೆ. ನನ್ನ ತಂದೆಯ ಅಕ್ಕ ತಂಗಿಯರು ಆ ಜಮೀನಿನಲ್ಲಿ ತಾವು ಜೀವಂತ ಇದ್ದಾಗಲೇ ನನ್ನ ತಂದೆ ಮತ್ತು ಆತನ ಅಣ್ಣ ತಮ್ಮಂದಿರರಿಗೆ ಹಕ್ಕು ಬಿಟ್ಟು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಜಮೀನನ್ನು 3 ಜನ ಅಣ್ಣ ತಮ್ಮದಿರರು 3 ಪಾಲು ಮಾಡಿಕೊಂಡು ಪ್ರತ್ಯೇಕವಾಗಿ ಕಬಜಾ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

5. ನನನ್ನ ಅಜ್ಜ ಲಗಮಾ ಹುಗ್ಗಿ ಇವರು ತೀರಿಕೊಂಡ ನಂತರ ನನ್ನ ಅತ್ತೆಯಂದಿರು, ನನ್ನ ತಂದೆ ಮತ್ತು ಆತನ ಸಹೋದರರಿಗೆ ಹಕ್ಕು ಬಿಟ್ಟು ಕೊಟ್ಟ ಬಗ್ಗೆ ಎಂ ಆರ್ ನಂ. 1410 ದಿನಾಂಕ 17-4-1962 ರಂದು ಡೈರಿ ಎಂಟ್ರಿ ಆಗಿದೆ ಎಂದರೆ ಸರಿಯಲ್ಲ. ಸದ್ರಿ ಮ್ಯೂಟೇಶನನ್ನು ನಾನಾಗಲೀ ಅಥವಾ ನನ್ನ ತಂದೆಯ ಇತರೆ ಅಣ್ಣ ತಮ್ಮಂದಿರರಾಗಲೀ ಚಾಲೆಂಜ ಮಾಡಿಲ್ಲ ಎಂದರೆ ನಿಜ. ಆ ಡೈರಿ ಆದ ನಂತರ ನನ್ನ ತಂದೆ , ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪ ಇವರ 3 ಜನರ ಹೆಸರು ದಾಖಲ ಆಗಿದೆ ಎಂದರೆ ನಿಜ. ಸದರಿ ದಾಖಲಾದ ಎಂಟ್ರಿ ಈಗಲೂ ಅವರು ಸಾಯುವ ತನಕ ಹಾಗೆಯೇ ದಾಖಲೆ ಇದೆ ಎಂದರೆ ನಿಜ. ಸದರಿ ಡೈರಿ ಎಂಟ್ರಿಯನ್ನು ಇದುವರೆಗೂ ನಮ್ಮ ಮನೆತನದವರು ಯಾರು ಪ್ರಶ್ನೆ ಮಾಡಿಲ್ಲ ಎಂದರೆ ನಿಜ.

6. ಹೊಳೆಯಪ್ಪನ ಹೆಂಡತಿಯ ಹೆಸರು ಶಿವಕ್ಕ ಎಂದರೆ ನಿಜ. ಶಿವಕ್ಕ ಸತ್ತು 10-12 ವರ್ಷ ಆಗಿದೆ. ಹೊಳೆಯಪ್ಪ ಮತ್ತು ಶಿವಕ್ಕನಿಗೆ 3 ಜನ ಹೆಣ್ಣು ಮಕ್ಕಳು. ಅವರ ಹೆಸರು 1. ಲಕ್ಕವ್ವ 2. ರಾಮಕ್ಕ 3. ಲಗಮಕ್ಕ , ಒಬ್ಬ ಮಗ ಕಾಡಪ್ಪ ( 2ನೇ ಪ್ರತಿವಾದಿ). 3 ಜನರನ್ನೂ ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಲಗಮವ್ವ ಮತ್ತು ಕಾಡಪ್ಪನನ್ನೂ ಮಾತ್ರ ಸೇರ್ಪಡೆ ಮಾಡಿದ್ದೇವೆ, ಲಕ್ಕವ್ವ ಮತ್ತು ರಾಮಕ್ಕ ಇವರನ್ನೂ ಸೇರ್ಪಡೆ ಮಾಡಿಲ್ಲ. ರಾಮಕ್ಕ ತೀರಿಕೊಂಡಿರುತ್ತಾಳೆ , ಲಕ್ಕವ್ವ ತೀರಿಕೊಂಡಿದ್ದಾಳೆ. ರಾಮಕ್ಕ ಮತ್ತು ಲಕ್ಕವ್ವ ಇವರ ಲಗ್ನ ಆಗಿದೋ ಇಲ್ಲವೋ ಹಾಗೂ ಅವರ ವಾರಸುದಾರರು ಜೀವಂತ ಇದ್ದಾರೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಅವರ ವಾರಸುದಾರರು ಬದುಕಿದ್ದರೂ ಸಹ ಅವರನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಅವರ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಅವರ ವಾರಸುದಾರರ ಮಾಹಿತಿಯನ್ನು ಗೊತ್ತಿದ್ದರೂ ಸಹ ಬಿಟ್ಟು ಈ ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಲಕ್ಕವ್ವ 2. ರಾಮಕ್ಕ 3. ಲಗಮಕ್ಕ ಇವರು ತಮ್ಮ ತಮ್ಮನಾದ ಕಾಡಪ್ಪ ( 2ನೇ ಪ್ರತಿವಾದಿ)ನಿಗೆ ತಮ್ಮ ಹಕ್ಕನ್ನು MR No. 2297 ದಿನಾಂಕ 19-12-1998 ಬಿಟ್ಟು ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಆ ಪ್ರಕಾರ ಕಾಡಪ್ಪನ ಹೆಸರು ಸ್ವತಂತ್ರವಾಗಿ ದಾಖಲ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

( ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದಂದ ಮುಂದೂಡಲಾಯಿತು)

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

**(ಆದಿತ್ಯ ಆರ್. ಕಲಾಲ್)**
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**